R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ– IV<br>**Part– IV** | ಬೆಂಗಳೂರು, ಮಂಗಳವಾರ, ೩೧, ಮಾರ್ಚ್, ೨೦೨೦ ( ಚೈತ್ರ ೧೧, ಶಕವರ್ಷ ೧೯೪೨)<br>**Bengaluru, TUESDAY, 31, MARCH, 2020 (Chaithra 11, ShakaVarsha 1942)** | ನಂ. ೧೨೦<br>**No. 120** |
|---|---|---|

## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

## ಅಧಿಸೂಚನೆ

## ಸಂಖ್ಯೆ: ಸಂವ್ಯಶಾಇ 17 ಶಾಸನ 2020 ಬೆಂಗಳೂರು, ದಿನಾಂಕ: 31.03.2020

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧ್ಯಾಧೇಶ, 2020 ಇದಕ್ಕೆ 2020ರ ಮಾರ್ಚ್ ತಿಂಗಳ 30 ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 02 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

2020 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 02

**ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧ್ಯಾಧೇಶ, 2020**

(ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯಪಾಲರಿಂದ ಪ್ರಖ್ಯಾಪಿತವಾಗಿ 2020ರ 31ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧ್ಯಾದೇಶ.

ಕರ್ನಾಟಕ ವಿಧಾನಸಭೆ ಮತ್ತು ಕರ್ನಾಟಕ ವಿಧಾನ ಪರಿಷತ್ತು ಅಧಿವೇಶನದಲ್ಲಿ ಇಲ್ಲದಿರುವುದರಿಂದ ಮತ್ತು ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಅಧ್ಯಾದೇಶವನ್ನು ಪ್ರಖ್ಯಾಪಿಸಲು, ಶ್ರೀಘ್ರ ಕ್ರಮವನ್ನು ತೆಗೆದುಕೊಳ್ಳುವುದು ಅವಶ್ಯಗೊಳಿಸುವಂಥ ವಿದ್ಯಮಾನಗಳು ಉಂಟಾಗಿವೆಯೆಂದು ಕರ್ನಾಟಕ ಮಾನ್ಯ ರಾಜ್ಯಪಾಲರಿಗೆ ಮನದಟ್ಟಾಗಿರುವುದರಿಂದ;

ಈಗ, ಭಾರತ ಸಂವಿಧಾನದ 213ನೇ ಅನುಚ್ಛೇದದ (1)ನೇ ಖಂಡದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕದ ರಾಜ್ಯಪಾಲರು ಈ ಮುಂದಿನ ಅಧ್ಯಾದೇಶವನ್ನು ಪ್ರಖ್ಯಾಪಿಸಿದ್ದಾರೆ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧ್ಯಾದೇಶವನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧ್ಯಾದೇಶ, 2020 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ನ್ನು (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದ (18)ನೇ ಖಂಡದಲ್ಲಿ "ಕುಷ್ಠರೋಗ" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು.

**3. 5ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 5ನೇ ಪ್ರಕರಣದ ಉಪಪ್ರಕರಣ (4)ರ ಪರಂತುಕದಲ್ಲಿ "ಹತ್ತು ವರ್ಷಗಳು" ಎಂಬ ಪದಗಳಿಗೆ "ಐದು ವರ್ಷಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**4. 7ನೇ ಪ್ರಕರಣದತಿದ್ದುಪಡಿ.-**ಮೂಲ ಅಧಿನಿಯಮದ 7ನೇ ಪ್ರಕರಣದ (2)ನೇಉಪಪ್ರಕರಣದಲ್ಲಿ "ಪಕ್ಷದ ಆಧಾರದ ಮೇಲಲ್ಲದೆ" ಎಂಬ ಪದಗಳಿಗೆ "ಪಕ್ಷದ ಆಧಾರ ರಹಿತವಾಗಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**5. 12ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 12ನೇ ಪ್ರಕರಣದಲ್ಲಿ,-

(i) (ಎಲ್) ಖಂಡದಲ್ಲಿ "ಸದಸ್ಯತ್ವದ ಅವಧಿಯಲ್ಲಿ" ಎಂಬ ಪದಗಳ ತರುವಾಯ "ಅಥವಾ ಪಂಚಾಯತ್ ನ ಯಾವುದೇ ಪದವನ್ನು ಹೊಂದಿರುವಾಗ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) ಪರಂತುಕದಲ್ಲಿನ (ಡಿ)ನಮೂದಿನ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ :-

"(ಇ) (ಎಲ್) ಖಂಡದ ಅಡಿಯಲ್ಲಿನ ಅನರ್ಹತೆಯ ಕಾರ್ಯಾಚರಣೆಯು (Operate) ಆದೇಶದ ದಿನಾಂಕದಿಂದ ಆರು ವರ್ಷಗಳು ಮುಕ್ತಾಯವಾದ ತರುವಾಯ ನಿಂತುಹೋಗತಕ್ಕದ್ದು"

**6. 43-ಎ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 43-ಎ ಪ್ರಕರಣದ (1)ನೇ ಉಪಪ್ರಕರಣದಲ್ಲಿ,-

(i) "ಸರ್ಕಾರವು" ಎಂಬ ಪದದ ತರುವಾಯ "ಅಥವಾ ಸರ್ಕಾರವು ಅಧಿಕೃತಗೊಳಿಸಿದ ಪ್ರಾಧಿಕಾರವು" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (iii)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

``ಪರಂತು, ಗೈರು ಹಾಜರಾಗಲು ಅನುಮತಿಗಾಗಿ ಸದಸ್ಯನು ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಿದ್ದಲ್ಲಿ ಮತ್ತು ಅರ್ಜಿಯ ದಿನಾಂಕದಿಂದ ಏಳು ದಿನಗಳ ಅವಧಿಯೊಳಗೆ ಆ ಅರ್ಜಿಯ ಸಂಬಂಧದಲ್ಲಿ ತನ್ನ ತೀರ್ಮಾನವನ್ನು ಅರ್ಜಿದಾರರಿಗೆ ತಿಳಿಸಲು ಗ್ರಾಮ ಪಂಚಾಯತಿ ತಪ್ಪಿದ್ದಲ್ಲಿ ಕೋರಲಾದ ಅನುಮತಿಯನ್ನು ಗ್ರಾಮ ಪಂಚಾಯತಿಯು ಮಂಜೂರು ಮಾಡಿರುವುದಾಗಿ ಭಾವಿಸತಕ್ಕದ್ದು."; ಮತ್ತು

(iii) (v)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(vi) ಅವನು ಮಾಜಿ ಅಧ್ಯಕ್ಷ ಅಥವಾ ಮಾಜಿ ಉಪಾಧ್ಯಕ್ಷ ಅಥವಾ ಮಾಜಿ ಸದಸ್ಯನಾಗಿ ದುರ್ನಡತೆ, ಅನುದಾನ ದುರುಪಯೋಗ ಮತ್ತು ಇನ್ನಿತರೆ ಯಾವುದೇ ಪ್ರಕರಣದಡಿ ಆರೋಪಿತನಾಗಿದ್ದು, ತನಿಖೆಯಲ್ಲಿ ಆರೋಪ ಸಾಬೀತಾದರೆ".

**7. 44ನೇ ಪ್ರಕರಣದ ತಿದ್ದುಪಡಿ.-**ಮೂಲ ಅಧಿನಿಯಮದ 44ನೇ ಪ್ರಕರಣದ (2)ನೇ ಉಪಪ್ರಕರಣದ (ಸಿ) ಖಂಡದಲ್ಲಿನ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

``ಮತ್ತು ಪರಂತು, ಈ ಉಪಪ್ರಕರಣದಡಿಯಲ್ಲಿ ಮೀಸಲಿರಿಸಿದ ಪದಾವಧಿಯು ಮೂವತ್ತು ತಿಂಗಳಾಗಿರತಕ್ಕದ್ದು.''

**8. 46ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 46ನೇ ಪ್ರಕರಣದ(1)ನೇ ಉಪಪ್ರಕರಣದಲ್ಲಿ "ಐದು ವರ್ಷಗಳು" ಎಂಬ ಪದಗಳಿಗೆ "ಮೂವತ್ತು ತಿಂಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**9. 48ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 48ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದಲ್ಲಿ ಮೂರನೇ ಪರಂತುಕವನ್ನು ಬಿಟ್ಟುಬಿಡತಕ್ಕದ್ದು; ಮತ್ತು

(ii) (4)ನೇ ಉಪಪ್ರಕರಣದಲ್ಲಿ ``ಸರ್ಕಾರವು'' ಎಂಬ ಪದದ ತರುವಾಯ ``ಅಥವಾ ಸರ್ಕಾರವು ಅಧಿಕೃತಗೊಳಿಸಿದ ಪ್ರಾಧಿಕಾರವು'' ಎಂಬ ಪದಗಳನ್ನು ಸೇರಿಸತಕ್ಕದ್ದು.

**10. 49ನೇ ಪ್ರಕರಣದ ತಿದ್ದುಪಡಿ.-**ಮೂಲ ಅಧಿನಿಯಮದ 49ನೇ ಪ್ರಕರಣದಲಿ,-

(i) (1)ನೇ ಉಪಪ್ರಕರಣದಲ್ಲಿ,-

(ಎ) ಎರಡನೇ ಪರಂತುಕದಲ್ಲಿ "ಮೂವತ್ತು ತಿಂಗಳುಗಳ" ಎಂಬ ಪದಗಳಿಗೆ "ಹದಿನೈದು ತಿಂಗಳುಗಳ" ಎಂಬಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) ಮೂರನೇ ಪರಂತುಕದಲ್ಲಿ "ಎರಡು ವರ್ಷಗಳ ಒಳಗೆ" ಎಂಬ ಪದಗಳಿಗೆ "ಆರು ತಿಂಗಳ ಒಳಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) (2)ನೇ ಉಪಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

**11. 58ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 58ನೇಪ್ರಕರಣದ (1ಎ) ಉಪಪ್ರಕರಣದಲ್ಲಿ,-

(i) (i)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

``(i-ಎ) ಪ್ರತಿ ವರ್ಷ ಯಾವುದೇ ಹೊಸ ಮನೆಗಳು ನಿರ್ಮಾಣವಾದಾಗ ಆ ಎಲ್ಲಾ ಮನೆಗಳಿಗೆ ಕಡ್ಡಾಯವಾಗಿ ಶೌಚಗೃಹಗಳನ್ನು ನಿರ್ಮಿಸುವುದು;'' ಮತ್ತು

(ii) (xiii)ನೇ ಖಂಡದಲ್ಲಿ "ಮತ್ತು ಮಾಲೀಕರಿಲ್ಲದ ನಾಯಿಗಳನ್ನು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದುಹಾಗೂ "ಸಾಯಿಸುವುದು" ಎಂಬ ಪದದ ತರವಾಯ "ಬೀದಿ ನಾಯಿಗಳ ಮತ್ತು ಮಾಲೀಕರಿಲ್ಲದ ನಾಯಿಗಳ ಸಂಖ್ಯೆಯನ್ನು ನಿಯಂತ್ರಿಸಲು ಸಂತಾನ ಹರಣ ಚಿಕಿತ್ಸೆ (ABC) ಮಾಡುವುದು" ಎಂಬ ಪದಗಳನ್ನು ಸೇರಿಸತಕ್ಕದ್ದು.

**12. 64ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 64ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ಕಟ್ಟಡವನ್ನು ಬದಲಾಯಿಸತಕ್ಕದ್ದಲ್ಲ" ಎಂಬ ಪದಗಳ ತರುವಾಯ "ಅಥವಾ ಜಾಹಿರಾತು ಫಲಕಗಳನ್ನು ನಿಲ್ಲಿಸಲು" ಎಂಬ ಪದಗಳನ್ನು ಸೇರಿಸತಕ್ಕದ್ದು.

**13. 111ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 111ನೇ ಪ್ರಕರಣದ (3)ನೇ ಉಪಪ್ರಕರಣದ (ಎಫ್) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ,-

"(ಜಿ) ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಗ್ರಾಮ ಪಂಚಾಯತಿಯು ಕೈಗೊಂಡ ಎಲ್ಲಾ ಕಾನೂನು ಬದ್ಧ ನಿರ್ಣಯಗಳು ಹಾಗೂ ನಿರ್ಧಾರಗಳನ್ನು ಜಾರಿಗೊಳಿಸುವ ಮತ್ತು ಗ್ರಾಮ ಪಂಚಾಯತಿಯ ಆದೇಶಗಳಿಗೆ ಸಹಿ ಮಾಡುವ ಜವಾಬ್ದಾರಿ ಹೊಂದಿರುವುದು."

**14. 123ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 123ನೇ ಪ್ರಕರಣದ (3)ನೇ ಉಪಪ್ರಕರಣದ ಪರಂತುಕದಲ್ಲಿ "ಹತ್ತು ವರ್ಷಗಳ" ಎಂಬ ಪದಗಳಿಗೆ "ಐದು ವರ್ಷಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**15. 128ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 128ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ,-

(i) (ಕೆ)ಖಂಡದ ತರುವಾಯ (ಎಲ್) ಖಂಡವನ್ನು ಸೇರಿಸತಕ್ಕದ್ದುಎಂದರೆ:-

"(ಎಲ್) ಪಂಚಾಯತಿಯ ಸದಸ್ಯನಾಗಿ ಪಂಚಾಯತಿಯ ಯಾವುದೇ ಸ್ಕೀಮು, ಯೋಜನೆ, ಪ್ರಾಜೆಕ್ಟನ್ನು ಕಾರ್ಯಗತಗೊಳಿಸುವಾಗ ಯಾವುದೇ ಕಾರ್ಯದಲ್ಲಿ ಅಧಿಕಾರ ಅಥವಾ ಪ್ರಾಧಿಕಾರದ ದುರುಪಯೋಗ ಅಥವಾ ದುರ್ಬಳಕೆಯಲ್ಲಿ ನೇರವಾಗಿ ಅಥವಾ ಆತನ ಸದಸ್ಯತ್ವದ ಅವಧಿಯಲ್ಲಿ ಅಥವಾ ಪಂಚಾಯಿತಿಯ ಯಾವುದೇ ಪದವನ್ನು ಹೊಂದಿರುವಾಗ, ಪಂಚಾಯತಿಯ ನಿಧಿಗಳು ಅಥವಾ ಇತರ ಸ್ವತ್ತುಗಳ ದುರ್ವಿನಿಯೋಗದಲ್ಲಿ ಭಾಗಿಯಾಗಿ, ಆತನು ತಪ್ಪಿತಸ್ಥನೆಂದು ಕಂಡು ಬಂದರೆ";

(ii) ಪರಂತುಕದಲ್ಲಿ,-

(ಎ) (ಸಿಸಿ) ನಮೂದಿನಲ್ಲಿ "ಮೂರು ವರ್ಷಗಳು" ಎಂಬ ಪದಗಳಿಗೆ "ಆರು ವರ್ಷಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) (ಡಿ) ನಮೂದಿನ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ:-

"(ಇ) (ಎಲ್) ಖಂಡದ ಅಡಿಯಲ್ಲಿನ ಅನರ್ಹತೆಯ ಕಾರ್ಯಾಚರಣೆಯು (Operate) ಆದೇಶದ ದಿನಾಂಕದಿಂದ ಆರು ವರ್ಷಗಳು ಮುಕ್ತಾಯವಾದ ತರುವಾಯ ನಿಂತುಹೋಗತಕ್ಕದ್ದು"

**16. 136ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 136ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ,-

(i) ``ಸರ್ಕಾರವು'' ಎಂಬ ಪದದ ತರುವಾಯ ``ಅಥವಾ ಈ ಕುರಿತುಸರ್ಕಾರವು ಆದೇಶದ ಮೂಲಕ ಅಧಿಕೃತಗೊಳಿಸಿದ ಪ್ರಾಧಿಕಾರವು'' ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (i)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

``ಪರಂತು, ಗೈರು ಹಾಜರಾಗಲು ಅನುಮತಿಗಾಗಿ ಸದಸ್ಯನು ತಾಲ್ಲೂಕು ಪಂಚಾಯತಿಗೆ ಅರ್ಜಿ ಸಲ್ಲಿಸಿದ್ದಲ್ಲಿ ಮತ್ತು ಅರ್ಜಿಯ ದಿನಾಂಕದಿಂದ ಏಳು ದಿನಗಳ ಅವಧಿಯೊಳಗೆ ಆ ಅರ್ಜಿಯ ಸಂಬಂಧದಲ್ಲಿ ತನ್ನ ತೀರ್ಮಾನವನ್ನು ಅರ್ಜಿದಾರರಿಗೆ ತಿಳಿಸಲು ತಾಲ್ಲೂಕು ಪಂಚಾಯತಿ ತಪ್ಪಿದ್ದಲ್ಲಿ ಕೋರಲಾದ ಅನುಮತಿಯನ್ನು ತಾಲ್ಲೂಕು ಪಂಚಾಯತಿಯು ಮಂಜೂರು ಮಾಡಿರುವುದಾಗಿ ಭಾವಿಸತಕ್ಕದ್ದು."; ಮತ್ತು

(iii) (v)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(vi) ಅವನು ಮಾಜಿ ಅಧ್ಯಕ್ಷ ಅಥವಾ ಮಾಜಿ ಉಪಾಧ್ಯಕ್ಷ ಅಥವಾ ಮಾಜಿ ಸದಸ್ಯನಾಗಿ ದುರ್ನಡತೆ, ಅನುದಾನ ದುರುಪಯೋಗ ಮತ್ತು ಇನ್ನಿತರೆ ಯಾವುದೇ ಪ್ರಕರಣದಡಿ ಆರೋಪಿತನಾಗಿದ್ದು, ತನಿಖೆಯಲ್ಲಿ ಆರೋಪ ಸಾಬೀತಾದರೆ"

**17. 138ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 138ನೇ ಪ್ರಕರಣದಲ್ಲಿ,-

(i) (2)ನೇ ಉಪಪ್ರಕರಣದ (ಎ) ಖಂಡದಲ್ಲಿನ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಈ ಉಪಪ್ರಕರಣದಡಿಯಲ್ಲಿ ಮೀಸಲಿರಿಸಿದ ಪದಾವಧಿಯು ಮೂವತ್ತು ತಿಂಗಳುಗಳಾಗಿರತಕ್ಕದ್ದು." ; ಮತ್ತು

(ii) (3)ನೇ ಉಪಪ್ರಕರಣದಲ್ಲಿ "ಐದು ವರ್ಷಗಳು" ಎಂಬ ಪದಗಳಿಗೆ "ಮೂವತ್ತು ತಿಂಗಳುಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**18. 140ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 140ನೇ ಪ್ರಕರಣದಲ್ಲಿ,-

(i) (3)ನೇ ಉಪಪ್ರಕರಣದಲ್ಲಿ,-

(ಎ) ಮೊದಲನೇ ಪರಂತುಕದಲ್ಲಿ "ಮೂವತ್ತು ತಿಂಗಳೊಳಗೆ" ಎಂಬ ಪದಗಳಿಗೆ "ಹದಿನೈದು ತಿಂಗಳೊಳಗೆ" ಎಂಬಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಎರಡನೇ ಪರಂತುಕದಲ್ಲಿ "ಎರಡು ವರ್ಷಗಳೊಳಗೆ" ಎಂಬ ಪದಗಳಿಗೆ "ಆರು ತಿಂಗಳೊಳಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) (4)ನೇ ಉಪಪ್ರಕರಣದಲ್ಲಿ ``ಸರ್ಕಾರವು'' ಎಂಬ ಪದದ ತರುವಾಯ ``ಅಥವಾ ಈ ಕುರಿತು ಸರ್ಕಾರವುಅಧಿಕೃತಗೊಳಿಸಿದ ಪ್ರಾಧಿಕಾರವು'' ಎಂಬ ಪದಗಳನ್ನು ಸೇರಿಸತಕ್ಕದ್ದು.

**19. 141ನೇ ಪ್ರಕರಣ ತಿದ್ದುಪಡಿ.-** ಮೂಲ ಅಧಿನಿಯಮದ 141ನೇ ಪ್ರಕರಣದ (6)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(6) ಅಧ್ಯಕ್ಷಅಥವಾಉಪಾಧ್ಯಕ್ಷನ ವಿರುದ್ಧ ಯಾವುದೇ ಅವಿಶ್ವಾಸ ಗೊತ್ತುವಳಿ ಇದೆ ಎಂದು ತಾಲ್ಲೂಕು ಪಂಚಾಯತಿಯು ಪರಿಗಣಿಸಿದರೆ, ಡೆಪ್ಯೂಟಿ ಕಮೀಷನರನು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು."

**20. 160ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 160ನೇ ಪ್ರಕರಣದಲ್ಲಿ ಪರಂತುಕದಲ್ಲಿನ (ii) ನೇ ಬಾಬುವನ್ನು ಬಿಟ್ಟುಬಿಡತಕ್ಕದ್ದು.

**21. 162ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 162ನೇ ಪ್ರಕರಣದ (3)ನೇ ಉಪಪ್ರಕರಣದ ಪರಂತುಕದಲ್ಲಿ "ಹತ್ತು ವರ್ಷಗಳ" ಎಂಬ ಪದಗಳಿಗೆ "ಐದು ವರ್ಷಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**22. 167ನೇ ಪ್ರಕರಣದ ತಿದ್ದುಪಡಿ.-**ಮೂಲ ಅಧಿನಿಯಮದ 167ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ,-

(i) (ಕೆ) ಖಂಡದ ತರುವಾಯ ಈ ಮುಂದಿನ (ಎಲ್) ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(ಎಲ್) ಪಂಚಾಯತಿಯ ಸದಸ್ಯನಾಗಿ ಪಂಚಾಯತಿಯ ಯಾವುದೇ ಸ್ಕೀಮು, ಯೋಜನೆ, ಪ್ರಾಜೆಕ್ಟನ್ನು ಕಾರ್ಯಗತಗೊಳಿಸುವಾಗ ಯಾವುದೇ ಕಾರ್ಯದಲ್ಲಿ ಅಧಿಕಾರ ಅಥವಾ ಪ್ರಾಧಿಕಾರದ ದುರುಪಯೋಗ ಅಥವಾ ದುರ್ಬಳಕೆಯಲ್ಲಿ ನೇರವಾಗಿ ಅಥವಾ ಆತನ ಸದಸ್ಯತ್ವದ ಅವಧಿಯಲ್ಲಿ ಅಥವಾ ಪಂಚಾಯಿತಿಯ ಯಾವುದೇ ಪದವನ್ನು ಹೊಂದಿರುವಾಗ, ಪಂಚಾಯತಿಯ ನಿಧಿಗಳು ಅಥವಾ ಇತರ ಸ್ವತ್ತುಗಳ ದುರ್ವಿನಿಯೋಗದಲ್ಲಿ ಭಾಗಿಯಾಗಿ, ಆತನು ತಪ್ಪಿತಸ್ಥನೆಂದು ಕಂಡು ಬಂದರೆ;"

(ii) ಪರಂತುಕದಲ್ಲಿ,-

(ಎ) (ಸಿಸಿ) ನಮೂದಿನಲ್ಲಿ ಮೂರು ವರ್ಷಗಳು ಎಂಬ ಪದಗಳಿಗೆ ಆರು ವರ್ಷಗಳು ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) (ಡಿ) ನಮೂದಿನ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ:-

"(ಇ) (ಎಲ್) ಖಂಡದ ಅಡಿಯಲ್ಲಿನ ಅನರ್ಹತೆಯ ಕಾರ್ಯಾಚರಣೆಯು (Operate) ಆದೇಶದ ದಿನಾಂಕದಿಂದ ಆರು ವರ್ಷಗಳು ಮುಕ್ತಾಯವಾದ ತರುವಾಯ ನಿಂತುಹೋಗತಕ್ಕದ್ದು"

**23. 175ನೇ ಪ್ರಕರಣದತಿದ್ದುಪಡಿ.-** ಮೂಲ ಅಧಿನಿಯಮದ 175ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ,-

(i) ``ಸರ್ಕಾರವು'' ಎಂಬ ಪದದ ತರುವಾಯ ``ಅಥವಾ ಈ ಕುರಿತು ಸರ್ಕಾರವು ಅಧಿಕೃತಗೊಳಿಸಿದ ಪ್ರಾಧಿಕಾರವು" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (iii)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

``ಪರಂತು, ಗೈರು ಹಾಜರಾಗಲು ಅನುಮತಿಗಾಗಿ ಸದಸ್ಯನು ಜಿಲ್ಲಾ ಪಂಚಾಯತಿಗೆ ಅರ್ಜಿ ಸಲ್ಲಿಸಿದ್ದಲ್ಲಿ ಮತ್ತು ಅರ್ಜಿಯ ದಿನಾಂಕದಿಂದ ಏಳು ದಿನಗಳ ಅವಧಿಯೊಳಗೆ ಆ ಅರ್ಜಿಯ ಸಂಬಂಧದಲ್ಲಿ ತನ್ನ ತೀರ್ಮಾನವನ್ನು ಅರ್ಜಿದಾರರಿಗೆ ತಿಳಿಸಲು ಜಿಲ್ಲಾ ಪಂಚಾಯತಿ ತಪ್ಪಿದ್ದಲ್ಲಿ ಕೋರಲಾದ ಅನುಮತಿಯನ್ನು ಜಿಲ್ಲಾ ಪಂಚಾಯತಿಯು ಮಂಜೂರು ಮಾಡಿರುವುದಾಗಿ ಭಾವಿಸತಕ್ಕದ್ದು."

(iii) (v)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(vi) ಅವನು ಜಿಲ್ಲಾ ಪಂಚಾಯತಿಯ ಮಾಜಿ ಅಧ್ಯಕ್ಷ ಅಥವಾ ಮಾಜಿ ಉಪಾಧ್ಯಕ್ಷ ಅಥವಾ ಮಾಜಿ ಸದಸ್ಯನಾಗಿ ದುರ್ನಡತೆ, ಅನುದಾನ ದುರುಪಯೋಗ ಮತ್ತು ಇನ್ನಿತರೆ ಯಾವುದೇ ಪ್ರಕರಣದಡಿ ಆರೋಪಿತನಾಗಿದ್ದು, ತನಿಖೆಯಲ್ಲಿ ಆರೋಪ ಸಾಬೀತಾದರೆ;"

**24. 177ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 177ನೇ ಪ್ರಕರಣದಲ್ಲಿ,-

(i) (2)ನೇಉಪಪ್ರಕರಣದ (ಸಿ) ಖಂಡದಲ್ಲಿ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು, ಈ ಉಪಪ್ರಕರಣದಡಿಯಲ್ಲಿ ಮೀಸಲಿರಿಸಿದ ಪದಾವಧಿಯು ಮೂವತ್ತು ತಿಂಗಳುಗಳಾಗಿರತಕ್ಕದ್ದು."; ಮತ್ತು

(ii) (3)ನೇಉಪಪ್ರಕರಣದಲ್ಲಿ "ಐದು ವರ್ಷಗಳು" ಎಂಬ ಪದಗಳಿಗೆ "ಮೂವತ್ತು ತಿಂಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**25. 179ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 179ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ,-

(i) ವಾಕ್ಯದ ಪ್ರಾರಂಭದಲ್ಲಿ "ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು" ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ಮೊದಲನೇ ಪರಂತುಕದಲ್ಲಿ ``ಮೂವತ್ತು ತಿಂಗಳೊಳಗೆ'' ಎಂಬ ಪದಗಳಿಗೆ ``ಹದಿನೈದು ತಿಂಗಳೊಳಗೆ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(iii) ಎರಡನೇ ಪರಂತುಕದಲ್ಲಿ ``ಎರಡು ವರ್ಷಗಳೊಳಗೆ'' ಎಂಬ ಪದಗಳಿಗೆ ``ಆರು ತಿಂಗಳೊಳಗೆ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**26. 180ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 180ನೇ ಪ್ರಕರಣ (6)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(6) ಅಧ್ಯಕ್ಷ ಅಥವಾ ಉಪಾಧ್ಯಕ್ಷನ ವಿರುದ್ಧ ಯಾವುದೇ ಅವಿಶ್ವಾಸ ಗೊತ್ತುವಳಿ ಇದೆ ಎಂದು ಪರಿಗಣಿಸಿದರೆ, ಪ್ರಾದೇಶಿಕ ಆಯುಕ್ತನು ಅಥವಾ ಸರ್ಕಾರವು ಅಧಿಕೃತಗೊಳಿಸಿದ ಯಾವೊಬ್ಬ ಇತರ ತತ್ಸಮಾನ ಅಧಿಕಾರಿಯು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು"

**27. 196ನೇ ಪ್ರಕರಣ ತಿದ್ದುಪಡಿ.**-ಮೂಲ ಅಧಿನಿಯಮದ 196ನೇಪ್ರಕರಣದ(1)ನೇ ಉಪಪ್ರಕರಣದ ಪರಂತುಕದಲ್ಲಿ "1988ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ ಪ್ರಾರಂಭವಾದ ದಿನಾಂಕದಿಂದ ಮೂರು ವರ್ಷಗಳ ಅವಧಿಗಾಗಿ"ಎಂಬ ಪದಗಳು,ಆವರಣ ಚಿಹ್ನೆಗಳು ಮತ್ತು ಅಂಕಿಗಳನ್ನು ಬಿಟ್ಟುಬಿಡತಕ್ಕದ್ದು.

**28. 197ನೇ ಪ್ರಕರಣ ತಿದ್ದುಪಡಿ.**-ಮೂಲ ಅಧಿನಿಯಮದ 197ನೇ ಪ್ರಕರಣದ(3)ನೇ ಉಪಪ್ರಕರಣದಲ್ಲಿನ ಪರಂತುಕದಲ್ಲಿ "ಹದಿನೈದುದಿನಗಳೊಳಗೆ"ಎಂಬ ಪದಗಳಿಗೆ "ಅರವತ್ತು ದಿನಗಳೊಳಗೆ"ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**29. 237ನೇ ಪ್ರಕರಣ ತಿದ್ದುಪಡಿ.**-ಮೂಲ ಅಧಿನಿಯಮದ 237ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ಯಾವುದೇ ಆದೇಶದ ಅಮಲ್ಜಾರಿ ಅಥವಾ"ಎಂಬ ಪದಗಳ ತರುವಾಯ " ಈ ಅಧಿನಿಯಮದ 64,70,113 ಮತ್ತು 269ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರಗಳು ಕೈಗೊಂಡ ಕಾನೂನು ಬದ್ಧ ತೀರ್ಮಾನಗಳ ಹೊರತಾಗಿ"ಎಂಬ ಪದಗಳನ್ನು ಸೇರಿಸತಕ್ಕದ್ದು.

**30. 308ಎಎನೇ ಪ್ರಕರಣದ ತಿದ್ದುಪಡಿ.**-ಮೂಲ ಅಧಿನಿಯಮದ 308ಎಎ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು. ಎಂದರೆ,-

**"308ಎಎ ಚುನಾವಣೆಗಳ ವೇಳಾಪಟ್ಟಿ**,-ರಾಜ್ಯ ಚುನಾವಣಾ ಆಯೋಗವು ಪಂಚಾಯತ್‌ನ ಅವಧಿಯು ಪೂರ್ಣಗೊಳ್ಳುವುದಕ್ಕೆ ಮೊದಲು ಚುನಾವಣಾ ಪ್ರಕ್ರಿಯೆಯನ್ನು ಪೂರ್ಣಗೊಳಿಸತಕ್ಕದ್ದು ಮತ್ತು ಚುನಾವಣಾ ಅನುಸೂಚಿಯನ್ನು ಹೊರಡಿಸುವುದಕ್ಕೆ ಮುಂಚೆ ನಲವತ್ತೈದು ದಿನಗಳಿಗೆ ಕಡಿಮೆ ಇಲ್ಲದಂತೆ ಸ್ಥಾನಗಳಮೀಸಲಾತಿಯನ್ನು ಮತ್ತು ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸತಕ್ಕದ್ದು"

**31. 308ಎಬಿಪ್ರಕರಣದತಿದ್ದುಪಡಿ.**-ಮೂಲಅಧಿನಿಯಮದ 308ಎಬಿಪ್ರಕರಣದಲ್ಲಿ,-

(i)(ಎ) ಖಂಡದಲ್ಲಿ "ಮೂರನೆಯ ದಿನವಾಗಿರತಕ್ಕದ್ದು"ಎಂಬ ಪದಗಳಿಗೆ "ನಾಲ್ಕನೆಯ ಕೆಲಸದ ದಿನವಾಗಿರತಕ್ಕದ್ದು"ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.; ಮತ್ತು

(ii) (ಡಿ) ಖಂಡದಲ್ಲಿ "ಏಳನೆಯ ದಿನಕ್ಕಿಂತ ಮುಂಚಿನ"ಪದಗಳಿಗೆ "ಏಳನೆಯ ದಿನಕ್ಕೆ ಮುಂಚಿನದಲ್ಲದ"ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**32.** **308ಎಸಿ ಪ್ರಕರಣದ ತಿದ್ದುಪಡಿ.**-ಮೂಲ ಅಧಿನಿಯಮದ ೩೦೮ಎಸಿ ಪ್ರಕರಣದ (1)ನೇ ಉಪಪ್ರಕರಣದಲ್ಲಿ,-

(i) (ಬಿ) ಖಂಡದಲ್ಲಿ "ಪ್ರತಿಯೊಂದು"ಎಂಬ ಪದಕ್ಕೆ "ಅತಿಸೂಕ್ಷ್ಮ"ಎಂಬಪದವನ್ನುಪ್ರತಿಯೋಜಿಸತಕ್ಕದ್ದು; ಮತ್ತು

(ii) (ಸಿ) ಖಂಡದಲ್ಲಿ,-

(ಎ)"ನೀತಿ ಸಂಹಿತೆಯು ಜಾರಿಯಲ್ಲಿರುವ ಇಡೀ ಅವಧಿವರೆಗೆ" ಎಂಬ ಪದಗಳಿಗೆ" ಚುನಾವಣೆಯ ಮತದಾನವು ಮುಕ್ತಾಯಗೊಳ್ಳುವ ನಲವತ್ತೆಂಟು ಗಂಟೆಗಳ ಮೊದಲಿನ"ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) "ಚುನಾವಣಾ ನೀತಿ ಸಂಹಿತೆಯು ಜಾರಿಯಲ್ಲಿರುವ" ಎಂಬ ಪದಗಳಿಗೆ "ಚುನಾವಣೆಯ ಮತದಾನವು ಮುಕ್ತಾಯಗೊಳ್ಳುವ ನಲವತ್ತೆಂಟು ಗಂಟೆಗಳ ಮೊದಲಿನ"ಎಂಬ ಪದಗಳನ್ನು ಸೇರಿಸತಕ್ಕದ್ದು.

**33.** **308ಬಿ ಪ್ರಕರಣದ ತಿದ್ದುಪಡಿ.**-ಮೂಲ ಅಧಿನಿಯಮದ ೩೦೮ಬಿ ಪ್ರಕರಣದಲ್ಲಿ "೩೦೮ಎ"ಎಂಬ ಸಂಖ್ಯೆ ಮತ್ತು ಅಕ್ಷರಕ್ಕೆ "೩೦೮ಎಡಿ"ಎಂಬ ಸಂಖ್ಯೆ ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

**34.** **309ಡಿ ಪ್ರಕರಣದತಿದ್ದುಪಡಿ.**-ಮೂಲ ಅಧಿನಿಯಮದ ೩೦೯ಡಿ ಪ್ರಕರಣದಲ್ಲಿ(1)ನೇ ಉಪ ಪ್ರಕರಣದ ಕೋಷ್ಟಕದಲ್ಲಿ,-

(i) (i)ನೇ ಖಂಡದ ತರುವಾಯ ಈಮುಂದಿನ ನಮೂದನ್ನುಸೇರಿಸತಕ್ಕದ್ದು, ಎಂದರೆ:-

| | | |
|---|---|---|
| (i-ಎ) | ಸಂಬಂಧಪಟ್ಟ ತಾಲ್ಲೂಕಿನ ಮತದಾರರಾಗಿರುವ ವಿಧಾನಪರಿಷತ್ ಸದಸ್ಯರು | ಉಪಾಧ್ಯಕ್ಷರು |

(ii) ಖಂಡ (ii), (iii) ಮತ್ತು (iv) ರಲ್ಲಿ "ಕೋ ಛೇರ್ಮನ್, ಕೋ ಛೇರ್ ಪರ್ಸನ್ ಮತ್ತು ವೈಸ್ ಛೇರ್ ಪರ್ಸನ್" ಎಂಬ ಪದಗಳಿಗೆ "ಸದಸ್ಯ" ಎಂಬ ಪದವನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು

**35.** **310ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ ೩೧೦ನೇ ಪ್ರಕರಣದ (2)ನೇ ಉಪಪ್ರಕರಣದ (ಇ) ಖಂಡಕ್ಕೆಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಇ) ಜಿಲ್ಲಾ ಪಂಚಾಯತ್‌ಗಳು, ತಾಲ್ಲೂಕು ಪಂಚಾಯತಿಗಳು, ಪಟ್ಟಣ ಪಂಚಾಯಿತಿಗಳು ಮತ್ತು ಜಿಲ್ಲೆಯಲ್ಲಿನ ನಗರ ಪಾಲಿಕೆಗಳು ಮತ್ತು ಪೌರನಿಗಮಗಳ ಕೌನ್ಸಿಲರುಗಳು ತಮ್ಮ ಪೈಕಿಯಿಂದ ನಿಯಮಿಸಿದ ರೀತಿಯಲ್ಲಿ ಚುನಾಯಿತರಾದ, ಸರ್ಕಾರವು ನಿರ್ದಿಷ್ಟ ಪಡಿಸಬಹುದಾದ ಅಂಥ ಸಮಿತಿಯ ಸದಸ್ಯರ ಒಟ್ಟು ಸಂಖ್ಯೆಯ ಐದನೇ ನಾಲ್ಕಕ್ಕಿಂತ ಕಡಿಮೆಯಿಲ್ಲದಷ್ಟು ಸದಸ್ಯರನ್ನು ಜಿಲ್ಲೆಯಲ್ಲಿನ ಗ್ರಾಮೀಣ ಪ್ರದೇಶಗಳು ಮತ್ತು ನಗರ ಪ್ರದೇಶಗಳ ಜನಸಂಖ್ಯೆಯ ನಡುವಣ ಧಾಮಾಷಾ ಪ್ರಮಾಣಕ್ಕೆ ಅನುಸಾರವಾಗಿ ಚುನಾಯಿಸತಕ್ಕದ್ದು".

**36.** **IVನೇ ಅನುಸೂಚಿಯ ತಿದ್ದುಪಡಿ.**-ಮೂಲ ಅಧಿನಿಯಮದ IVನೇ ಅನುಸೂಚಿಯಲ್ಲಿ,-

(i) ಎಖಂಡದ "ಕಟ್ಟಡಗಳಮೇಲೆತೆರಿಗೆ"ಶೀರ್ಷಿಕೆಯಭಾಗದಲ್ಲಿ (iii) ನೇಬಾಬುಮತ್ತುಅದಕ್ಕೆಸಂಬಂಧಿಸಿದನಮೂದುಗಳಿಗೆಈಮುಂದಿನದನ್ನುಪ್ರತಿಯೋಜಿಸತಕ್ಕದ್ದು, ಎಂದರೆ:-

| "ಎ | **ಕಟ್ಟಡಗಳಮೇಲೆತೆರಿಗೆ** | **ವಾರ್ಷಿಕದರ** |
|---|---|---|
| | (ಎ) ಅತಿಸಣ್ಣಕೈಗಾರಿಕೆ | ಶೇ.0.40. |
| | (ಬಿ) ಮಧ್ಯಮಕೈಗಾರಿಕೆ | ಶೇ.0.50. |
| | (ಸಿ) ಬೃಹತ್ಕೈಗಾರಿಕೆ | ಶೇ.0.60" |
| | ಸ್ವತ್ತಿನ ಪ್ರಧಾನ ಮೌಲ್ಯದ ಮೇಲೆ | |

(ii) “ಬಿ. ಖಾಲಿ ಜಮೀನುಗಳ ಮೇಲೆ ವಿಧಿಸುವ ತೆರಿಗೆ” ಎಂಬ ಖಂಡ ಮತ್ತುಅದಕ್ಕೆ ಸಂಬಂಧಿಸಿದ ನಮೂದುಗಳ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

| “ಸಿ | | |
|---|---|---|
| | (1) ವಿಮಾನ ನಿಲ್ದಾಣದ ರನ್‌ವೇ ಪ್ರದೇಶ<br><br>(ಬಿ) ವಿಮಾನ ನಿಲ್ದಾಣ ಅಥವಾ ಕೈಗಾರಿಕಾ ಪ್ರದೇಶದ ಖಾಲಿ ಜಮೀನುಗಳಲ್ಲಿ ನೆಡುತೋಪುಗಳನ್ನು ಬೆಳೆಸಿರುವ ಪ್ರದೇಶಗಳು | ಸ್ವತ್ತಿನ ಪ್ರಧಾನ ಮೌಲ್ಯದ ಮೇಲೆ ಶೇ.0.10<br><br>ತೆರಿಗೆ ಇಲ್ಲ” |

**ವಜೂಭಾಯಿ ವಾಲಾ**
**ಕರ್ನಾಟಕದ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ
## ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 17 ಶಾಸನ 2020 ಬೆಂಗಳೂರು, ದಿನಾಂಕ: 31.03.2020**

The Karnataka Gram Swaraj and Panchayat Raj (Amendment) Ordinance, 2020 ಇದಕ್ಕೆ 2020ರ ಮಾರ್ಚ್ ತಿಂಗಳ 30ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 02 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**KARNATAKA ORDINANCE NO. 02 OF 2020**
**THE KARNATAKA GRAM SWARAJ AND PANCHAYAT RAJ**
**(AMENDMENT) ORIDNANCE, 2020**

(Promulgated by the Governor of Karnataka in the Seventy first year of the Republic of India and First published in the Karnataka Gazette Extra-ordinary on the 31st day of March, 2020)

An Ordinance further to amend the Karnataka Gram Swaraj and Panchayat Raj Act, 1993 (Karnataka Act 14 of 1993) and for matters connected therewith or incidental thereto;

Whereas the Karnataka Legislative Assembly and the Karnataka Legislative Council are not in session and the Governor of Karnataka is satisfied that the circumstances exist which render it necessary for him to take immediate action to promulgate the Ordinance for the purposes hereinafter appearing;

Now, therefore, in exercise of the powers conferred by clause (1) of Article 213 of the Constitution of India, the Governor of Karnataka is pleased to promulgate the following Ordinance, namely:-

**1. Short title and commencement.-**(1) This Ordinance may be called the Karnataka Gram Swaraj and Panchayat Raj (Amendment) Ordinance, 2020.

(2) It shall come into force at once.

**2. Amendment of section 2.-**In section 2of the Karnataka Gram Swaraj and Panchayat Raj Act, 1993 (Karnataka Act 14 of 1993) (hereinafter referred to as the Principal Act), in clause (18),the word “leprosy” shall be omitted.

**3. Amendment of section 5.-**In section 5 of the Principal Act, in sub-section (4), in the first proviso, for the words “ten years”, the words “five years”, shall be substituted.

**4.Amendment of section 7.-** In section 7 of the Principal Act, in sub-section (2), for the words “on non party basis”, the words “on non party basis”, shall be substituted.

**5.Amendment of section 12.-** In section 12 of the Principal Act,- (i) in clause (l) the following shall be inserted at the end, namely:-

“or while holding any office of panchayat”

(ii) in the proviso, after item (d), the following shall be inserted, namely:-

“(e) the disqualification under clause (l) shall cease to operate after the expiry of six years from the date of the order.”

**6. Amendment of section 43-A.-** In section 43-A of the Principal Act in sub section (1),-

(i) after the words “the Government”, the words “or an Authority authorised by the Government”, shall be inserted;

(ii) after clause (iii),the following shall be inserted, namely:-

“Provided that where an application is made by a member to the Grama Panchayat for leave to absent himself and Grama panchayat fails to inform the applicant of its decision on the application within a period of seven days from the date of the application, the leave applied for shall be deemed to have been granted by the Grama Panchayat.”; and

(iii) after clause (v),the following shall be inserted namely:-

"(vi) if a former Adhyaksha or Upadhyaksha or member of Grama Panchayat has been accused and proved guilty for misconduct or misappropriation in an Inquiry".

**7. Amendment of section 44.-** In section 44 of the Principal Act, in sub-section (2), in clause (c) after the proviso, the following shall be inserted, namely:-

"Provided further that the duration of the offices reserved under this sub-section shall be thirty months".

**8. Amendment of section 46.-** In section 46 of the Principal Act, in sub-section (1), for the words "five years", the words "thirty months" shall be substituted.

**9. Amendment of section 48.-** In section 48 of the Principal Act,-

(i) in sub-section (1), the third proviso shall be omitted; and

(ii) in sub-section (4), after the word "Government" the words "or an authority authorised by the Government" shall be inserted.

**10. Amendment of section 49.-** In section 49 of the Principal Act,-

(i) in sub-section (1),-

(a) in the second proviso, for the words "thirty months" the words "fifteen months" shall be substituted;

(b) in the third proviso, for the words "within two years" the words "six months" shall be substituted; and

(ii) sub-section (2) shall be omitted.

**11. Amendment of section 58.-** In section 58 of the Principal Act, in sub-section (1A),-

(i) after clause (i), the following shall be inserted, namely:-

"(i-a) providing sanitary latrines to all new house constructed every year"; and

(ii) in clause (xiii),forthe words "and owner less dogs" the words "and to conduct animal birth control measures to control the number of street dogs, ownerless dogs". shall be substituted;

**12. Amendment of section 64.-** In section 64 of the Principal Act, in sub-section (1), after the words "any existing building" the words "or erect advertisement hoarding" shall be inserted.

**13. Amendment of section 111.-** In section 111 of the Principal Act, in sub-section (3), after the clause (f), the following shall be inserted, namely:-

"(g) to execute all lawful decision and resolutions taken by the Grama Panchayath under the Act and sign all the orders of the Grama Panchayath".

**14. Amendment of section 123.-** In section 123 of the Principal Act, in the proviso to sub-section (3),for the words "ten years" the words "five years" shall be substituted.

**15. Amendment of section 128.-** In section 128 of the Principal Act, in sub-section (1),

(i) after clause (k), clause (l) shall be inserted, namely:-

"(l) if he is found guilty, directly involved in any act of misuse or abuse of power or authority as member of the panchayat in executing any scheme, plan or project of the panchayat or of misappropriation of funds or other assets of the panchayat during the term of his membership or while holding any office of panchayat."

(ii) in the proviso,-

(a) in item (cc), for the words "after expiry of three years", the words "after expiry of six years" shall be substituted. and

(b) after item (d), the following clause shall be inserted, namely:-

"(e) the disqualification under clause (l) shall cease to operate after the expiry of six years from the date of the order."

**16. Amendment of section 136.-** In section 136 of the Principal Act, in sub-section (1),-

(i) after the words "Government" the words "or the authority authorized by the Government by order in this behalf." shall be inserted;

(ii) after clause (i), the following shall be inserted, namely:-

"Provided that where an application is made by a member to the Taluk Panchayat for leave of absence to himself and Taluk Panchayat fails to inform the applicant of its decision on the application within a period of seven days from the date of the application, the leave applied for, shall be deemed to have been granted by the Taluk Panchayat".; and

(iii) after clause (v), the following shall be inserted, namely:-

"(vi) if a former Adhyaksha or Upadhyaksha or member of Taluk Panchayat has been accused and proved guilty of misconduct or misappropriation in an Inquiry."

**17. Amendment of section 138.-** In section 138 of the Principal Act,-

(i) in sub-section (2), after clause (a),the following shall be inserted, namely:-

"Provided that, the duration of the offices reserved under this sub-section shall be thirty months"; and

(ii)in sub-section (3), for the words "five years" the words "thirty months" shall be substituted.

**18. Amendment of section 140.-** In section 140 of the Principal Act,-

(i) in sub-section (3),-

(a) in the first proviso, for the words "Thirty months" the words "fifteen months" shall be substituted;

(b) in the second proviso, for the words “two years” the words “six months” shall be substituted; and

(ii) in sub-section (4), after the words “Government” the words “or an authority authorized by the Government in this behalf ” shall be inserted.

**19. Amendment of section 141.-** In section 141 of the Principal Act, for sub-section (6),the following shall be substituted, namely:-

“(6) the Deputy Commissioner shall preside over the meeting in which no confidence motion against Adhyaksha or Upadhyaksha is being considered by the Taluk Panchayat.”

**20. Amendment of section 160.-** In section 160 of the Principal Act, in the proviso, item (ii) shall be omitted.

**21. Amendment of section 162.-** In section 162 of the Principal Act, in sub section (3), in the proviso, for the words “ten years” the words “five years” shall be substituted.

**22. Amendment of section 167.-** In section 167 of the Principal Act, in sub section (1),-

(i) after clause (k), the following clause (l) shall be inserted, namely:-

“(l) if he is found guilty, directly involved in any act of misuse or abuse of power or authority as member of the panchayat in executing any scheme, plan or project of the panchayat or of misappropriation of funds or other assets of the panchayat during the term of his membership or while holding any office of panchayat.”

(ii) in the proviso,-

(a) in item (cc), for the words “three years” the words “six years” shall be substituted.

(b) after item (d), the following shall be inserted namely:-

“(e) the disqualification under clause (l) shall cease to operate after the expiry of six years from the date of the order.”

**23. Amendment of section 175.-**In section 175 of the principal Act, in sub–section (1),-

(i) after the word “Government” the words “or an authority authorized by the Government in this behalf” shall be inserted;

(ii) after the clause (iii), the following shall be inserted, namely:-

“Provided that where an application is made by a member to the Zilla Panchayat for leave of absence to himself and Zilla Panchayat fails to inform the applicant of its decision on the application within a period of seven days from the date of the application, the leave applied for shall be deemed to have been granted by the Zilla Panchayat”.

(iii) after clause (v), the following shall be inserted, namely:-

"(vi) if a former Adhyaksha or Upadhyaksha or member of Zilla Panchayat has been accused and proved guilty for misconduct or misappropriation in an enquiry."

**24. Amendment of section 177.-**In section 177 of the principal Act,-

(i) in sub-section(2), in clause (c), after the proviso the following shall be inserted, namely:-

"Provided further that the duration of the offices reserved under this sub-section shall be for thirty months"; and

(ii) in sub-section (3), for the words "five years" the words "thirty months" shall be substituted.

**25. Amendment of section 179.-**In section 179 of the principal Act, in sub-section (3),-

(i) in the beginning the words "Subject to such rules as may be prescribed" shall be inserted;

(ii) in the first proviso, for the words "thirty months" the words "fifteen months" shall be substituted; and

(iii) in the second proviso, for the words "two years" the words "six months" shall be substituted.

**26. Amendment of section 180.-**In section 180 of the principal Act, for sub-section (6),the following shall be substituted, namely:-

"(6) The Regional Commissioner or any other equivalent officer authorized by the Government shall preside over the meeting in which no confidence motion against to Adhyaksha or upadhyaksha is being considered."

**27. Amendment of section 196.-**In section 196 of the principal Act, in sub–section (1),in the proviso, the words, brackets and figures "for a period of three year from the date of commencement of the Karnataka Panchayat Raj (Amendment) Act, 1998" shall be omitted.

**28. Amendment of section 197.-**In section 197 of the principal Act, in the proviso to sub-section (3), for the words "fifteen days" the words "thirty days" shall be substituted.

**29. Amendment of section 237.-**In section 237 of the principal Act, in sub-section (1),after the words "on behalf of Gram panchayat" the following shall be inserted, namely:-

"other than law full resolutions and decisions taken by the authorities specified in section 64, 70, 113 and 269 of this Act."

**30. Amendment of section 308 AA.-**In section 308AA of the principal Act,-

(i) in the heading and in section for the words "the schedule of elections" occurring in two places, the words "schedule of elections" shall be substituted; and

(ii) for the words "announced" the words "published" shall be substituted.

**31. Amendment of section 308 AB.-**In section 308AB of the principal Act, in sub-section (1),-

(i)in clause (a), for the words, "the third day" the words "the fourth working day" shall be substituted; and

(ii) in clause (d), for the words "not earlier than" the words "not earlier than" shall be substituted.

**32. Amendment of section 308 AC.-**In section 308AC of the principal Act, in sub section (1),-

(i) in clause (b), for the word "each" the words "hyper sensitive" shall be substituted; and

(ii) in clause (c),-

(a) for the words "the entire period during which code of conduct of election is in force" the words "during the period of forty eight hours before closing the polling of election" shall be substituted; and

(b) for the words "the code of conduct is in force" the words of "forty eight hours before closing the polling of election" shall be substituted.

**33. Amendment of section 308B.-** In section 308B of the principal Act, for the figures and letter "308A" the figures and letters "308 AD" shall be substituted.

**34. Amendment of section 309D.-** In section 309D of the principal Act, in sub-section (1), in the Table,-

(i) after clause (i), the following entry shall be inserted, namely:-

| | | |
|---|---|---|
| i-a | the member of the Legislative council registered as voter in that Taluk. | Vice chairman |

(ii) in clause (ii), (iii) and (iv) for the words "Co chairman, Co-chairperson and Vice chairperson" the word "Member" shall respectively be substituted.

**35. Amendment of section 310.-**In section 310 of the principal Act, in sub – section (2), for clause (e), the following substituted, namely:-

"(e) such number of person not less than four fifth of the total number of members of committees as may be specified by the Government elected in the prescribed manner from amongst the members of the Zilla Panchayats, Taluk Panchayats, Town Panchayats and Councilors of the Municipal corporations and Municipal councils in the district in proportion to the ratio between population of the rural areas and urban areas in the District".

**36. Amendment of schedule IV.-** In the schedule IV of the Principal Act,-

(i) under the heading 'A Tax on building' in item (ii), for the entries in column (3), the following shall be substituted, namely:-

| | | | |
|---|---|---|---|
| “(a) | Small Scale Industry | - | 0.40 percent |
| (b) | Medium Scale Industry | - | 0.50 percent |
| (c) | Large Scale Industries | - | 0.60 percent |
| | on the capital value of the property | | |

(ii) after the entries relating to “B. Vacant land measuring” the following shall be inserted, namely:-

(iii)

| | | | |
|---|---|---|---|
| (1) | Run way area of an Airport | - | 0.10 percent on the Capital value of the property |
| (b) | In case of vacant Land in Airport or Industrial area where plantations are grown | - | No tax ” |

**VAJUBHAI VALA**
**GOVERNOR OF KARNATAKA**

By order and in the name of the
Governor of Karnataka,

**(K. DWARAKANATH BABU)**
Secretary to Government
Department of Parliamentary Affairs and
Legislation.

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE Digitally signed by SUNIL GARDE Date: 2020.04.02 12:04:01 +05'30'